

“ಸುಶೀಲಾ ಇನ್ನಿಲ್ಲ. ನೀನು ಬರುವದು ಅವಶ್ಯವಿಲ್ಲ. ಆದರೆ, ನಿನಗೆ ಹೇಳುವುದು ಅನಿವಾರ್ಯವಾಗಿತ್ತು. ಅದಕ್ಕೇ ಹೇಳಿದೆ, ಅಷ್ಟೆ.”

ದಾದಾ ಅವರ ಟೆಲಿಗ್ರಾಂ ಬಂದಿತು. ರಘುನಾಥನ ನೆಮ್ಮದಿ ಹಾರಿ ಹೋಯಿತು. ಎಲ್ಲಿಯೋ ದೂರದಲ್ಲಿದ್ದ, ಮೂಲೆಯಲ್ಲಿದ್ದ ಜೇನುಗೂಡಿಗೆ ಕಲ್ಲು ಒಗೆದಂತೆ ಅವನ ಸ್ಥಿತಿ ಆಯಿತು. ನೆನಪುಗಳೆಲ್ಲ ಹಿಂಡು ಹಿಂಡಾಗಿ ಮೈ ಮೇಲೆ ಏರಿ ಬಂದಂತೆ ಆಯಿತು. ಸೂಟ್‌ಕೇಸಿನಲ್ಲಿ ಅರಿವೆಗಳನ್ನು ಹಾಕಿಕೊಂಡು ವೆಂಗುರ್ಲೆಗೆ ಹೊರಟು ಬಿಡಲೇ ಎಂಬ ವಿಚಾರ ಅವನ ಮನದಲ್ಲಿ ಸುಳಿದು ಹೋಯಿತು. ಕೊನೆಗೆ ಮುಖವನ್ನಾದರೂ ಕಾಣಬಹುದು... ಆದರೆ ನಾನು ಹೋಗುವಷ್ಟರಲ್ಲಿ ಎಲ್ಲ ಅಂತ್ಯವಿಧಿಗಳು ಮುಗಿದಿರಲೂ ಬಹುದು. ಯಾವಾಗ ಮರಣ ಹೊಂದಿದಳು ಎಂಬುದನ್ನು ದಾದಾ ತಿಳಿಸಲೇ ಇಲ್ಲವಲ್ಲ! ಕೇವಲ ಸುಶೀಲಾ ಇನ್ನಿಲ್ಲ. ಇಷ್ಟೇ!

ಸುಶೀಲಾ ರಘುವಿನ ಸೋದರತ್ತೆ. ದಾದಾ ಅವರ ತಂಗಿ. ತುಂಬಾ ಚೆಲುವೆ. ಗುಲಾಬಿ ಮೈಬಣ್ಣ. ಸಂಪಿಗೆಯಂತಹ ಮೂಗು, ಸುಕೋಮಲ ಶರೀರ, ರಾಜಮನೆತನಕ್ಕೆ ಒಪ್ಪುವ ಸೌಂದರ್ಯದ ಖಣಿ. ಆಕೆಯ ಮದುವೆ ಮಾಡಲು ದಾದಾ ಅವರು ಯಾವದೇ ಕಷ್ಟಗಳನ್ನು ಎದುರಿಸಬೇಕಾಗಲಿಲ್ಲ. ಕುಲೀನ ಮನೆತನದವರೂ, ಶ್ರೀಮಂತರೂ ತಾವಾಗಿಯೇ ಸೋದರತ್ತೆಯನ್ನು ಮದುವೆ ಮಾಡಿಕೊಳ್ಳಲು ಮುಂದೆ ಬರುತ್ತಿದ್ದರು, ದಾದಾ ಅವರನ್ನು ಬೆನ್ನ ಬಿದ್ದು ಕೇಳುತ್ತಿದ್ದರು. ರಘುನಾಥನೆಂದರೆ ಸೋದರತ್ತೆಗೆ ಬಲು ಪ್ರಾಣ!

ರಘುನಾಥನೂ ತನ್ನ ಅತ್ತೆಯ ಹಾಗೆ ಗೌರ ವರ್ಣದವನೂ ಚೆಲುವನೂ ಆಗಿದ್ದ. ಆಕೆಯ ಬೆನ್ನ ಹಿಂದೆಯೇ ಇರುತ್ತಿದ್ದ. ಯಾವಾಗಲೂ ಆಕೆಯನ್ನು ಅಂಟಿಕೊಂಡೇ ಇರುತ್ತಿದ್ದ. ಊಟತಿಂಡಿ, ನಿದ್ದೆ, ಅಭ್ಯಾಸ, ಆಟ, ಎಲ್ಲವೂ... ಇತರ ಎಲ್ಲ ಕಾರ್ಯಗಳಿಗೆ ಆತ ಸೋದರತ್ತೆಯನ್ನು ಅವಲಂಬಿಸಿದ್ದ. ಇಷ್ಟೇ ಅಲ್ಲ, ಅವನ ಮಲಗಿಕೊಳ್ಳುವ ಹಾಸಿಗೆಯೂ ಮಹಡಿಯ ಮೇಲೆ ಸೋದರತ್ತೆಯ ಗಾದಿಯ ಮಗ್ಗಲೇ ಇರುತ್ತಿತ್ತು.

‘ಸಿಂದಬಾದನ ಯಾತ್ರೆಗಳು’ ಈ ಕಥೆಯನ್ನು ಅತ್ತೆಯ ಹಾಗೆ ಹೇಳುವವರು ಈ ವಿಶ್ವದಲ್ಲಿಯೇ ಯಾರೂ ಇಲ್ಲ ಎಂದು ಆತ ದೃಢವಾಗಿ ನಂಬಿದ್ದ. ಅದು ಅವನ ತಲೆಯಲ್ಲಿ ಗಟ್ಟಿಯಾಗಿ ಕುಳಿತಿತ್ತು ಕೂಡ. ಅತ್ತೆ, ತನ್ನ ಅತ್ತೆಯ ಮನೆಗೆ ಹೊರಟರೆ, ಆಕೆಯ ಎರಡೂ ಕಾಲುಗಳನ್ನು ಉಡದಂತೆ ಗಟ್ಟಿಯಾಗಿ ಹಿಡಿದು ರಾದ್ಧಾಂತ ಮಾಡುತ್ತಿದ್ದ. ಭಾರೀ ಹುಯಿಲು ಎಬ್ಬಿಸುತ್ತಿದ್ದ. ಅವನನ್ನು ಸಂಭಾಳಿಸುವದೆಂದರೆ ಮನೆಯವರಿಗೆ ಸಾಕುಸಾಕಾಗುತ್ತಿತ್ತು.

ಸೋದರತ್ತೆ ಅತ್ತೆ ಮನೆಗೆ ಹೋದಳು. ಆಗ ರಘುವಿಗೆ ವಿಶ್ವವೇ ಶೂನ್ಯವೆನಿಸಿತು. ನೀರಸವೆನಿಸಿತು.

ಸೋದರತ್ತೆ ರಘುವನ್ನು ಜೋಪಾನವಾಗಿ ನೋಡಿಕೊಳ್ಳುತ್ತಿದ್ದುದರಿಂದ, ತನ್ನ ಇತರ ಮಕ್ಕಳ ರಂಪ, ದಾಂಧಲೆಯಲ್ಲಿ ತಾಯಿ ರಘುವಿನ ಕಡೆಗೆ ನೋಡುವುದನ್ನು ನಿರ್ಲಕ್ಷ್ಯ ಮಾಡಿದ್ದಳು. ಹೀಗಾಗಿ, ತಾಯಿ ಮಕ್ಕಳಲ್ಲಿ ಕೇವಲ ಹೊಕ್ಕಳಬಳ್ಳಿ ಸಂಬಂಧವಿತ್ತು. ಇನ್ನು ದಾದಾ ಅವರಂತೂ ಕಠಿಣ ಶಿಸ್ತಿನವರು. ಅವರನ್ನು ಕಂಡರೆ ಅದೆಂತಹದೋ ಭಯ! ಇನ್ನು ಉಳಿದ ಒಡಹುಟ್ಟಿದವರೊಡನೆ ಯಾಕೋ ಅಷ್ಟೇನು ಹೊಂದಾಣಿಕೆ ಆಗಲಿಲ್ಲ. ಅತ್ತೆ ಹೋದಮೇಲೆ ರಘು ಒಬ್ಬಂಟಿ ಆದ. ಅದರಲ್ಲೂ